5) ಯಲ್ಲಾಪುರ ತಾಲ್ಲೂಕಿನ ಮಾಗೋಡಿನಲ್ಲಿರುವ ಇಲಾಖೆಯ ಪ್ರವಾಸಿ ಗೃಹವನ್ನು 20 ವರ್ಷಗಳ ಅವಧಿಗೆ ಅರಣ್ಯ ಉಪಸಂರಕ್ಷಣಾಧಿಕಾರಿಗಳು, ಅರಣ್ಯ ಇಲಾಖೆ, ಯಲ್ಲಾಪುರ ವಿಭಾಗರವರಿಗೆ ದಿನಾಂಕ:1 9-9-83 ರಂದು ವಹಿಸಿಕೊಡಲಾಗಿದೆ.

6. ಬೆಳಗಾಂ-ಗೋವಾ ರಸ್ತೆ ಮಧ್ಯದಲ್ಲಿರುವ ಅನುಮೋಡ್ ಹೆದ್ದಾರಿ ಸೌಲಭ್ಯವನ್ನು ರೂ. 14.85 ಲಕ್ಷಗಳಿಗೆ ನಿರ್ಮಿಸಿ ಪ್ರವಾಸಿಗರ ಅನುಕೂಲಕ್ಕಾಗಿ ಖಾಸಗಿಯವರಿಗೆ ನಿರ್ವಹಣೆಗಾಗಿ ಲೀಸ್-ಕಂ-ಲೈಸನ್ಸ್ ಆಧಾರದ ಮೇಲೆ ವಹಿಸಿಕೊಡಲಾಗಿದೆ.

7. ಸೂಪ ತಾಲ್ಲೂಕು ರಾಮನಗರದ ಬಳಿ ರೂ.1,35,700.00 ವೆಚ್ಚದಲ್ಲಿ ಹೆದ್ದಾರಿ ಸೌಲಭ್ಯವನ್ನು ನಿರ್ಮಿಸಿ ಖಾಸಗೀಕರಣಗೊಳಿಸಲಾಗಿದೆ.

8. ಪ್ರವಾಸಿಗರ ಅನುಕೂಲಕ್ಕಾಗಿ ಕಾರವಾರದಲ್ಲಿ ಪ್ರಾದೇಶಿಕ ಪ್ರವಾಸಿ ಕಛೇರಿಯನ್ನು ತೆರೆಯಲಾಗಿದೆ.

ಕೈಗಾ ಘಟಕಕ್ಕೆ ಲೈನ್ ಮಾರ್ಗ ಹೋಗಲು ಅರಣ್ಯ ಪ್ರದೇಶ ನಾಶವಾಗುವ ಬಗ್ಗೆ.

2297(2730) ಶ್ರೀ ವಿಶ್ವೇಶ್ವರ ಹೆಗಡೆ ಹಾಗೇರಿ (ಅಂಕೋಲಾ) :— ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೈಗಾ1 ಮತ್ತು 2ನೇ ಘಟಕ ಲೈನ್ ಮಾರ್ಗ ಹೋಗಲು ಅರಣ್ಯ ಎಷ್ಟು ನಾಶವಾಗಿದೆ; ಎಲ್ಲೆಲ್ಲಿ?

ಆ) ಕೈಗಾ 3ನೇ ಮತ್ತು 4ನೇ ಘಟಕಕ್ಕೆ ಲೈನ್ ಮಾರ್ಗ ಹೋಗಲು ಯಾವ ಯಾವ ಅರಣ್ಯ ಪ್ರದೇಶ ಸಮೀಕ್ಷೆ ಆಗಿದೆ;

ಇ) ಇದರಿಂದ ನಾಶವಾಗುವ ಅರಣ್ಯ ಪ್ರದೇಶ ಎಷ್ಟು?

ಈ) ಅರಣ್ಯ ನಾಶವಾಗದೇ ಬೇರೆ ಮಾರ್ಗದಲ್ಲಿ ಲೈನ್ ಮಾರ್ಗ ಸಾಗಲು ತೊಂದರೆಯೇನು?

ಉ) ಸರ್ಕಾರ ಇದರ ಬಗ್ಗೆ ಆಲೋಚನೆ ಮಾಡಿದೆಯೇ ಹೇಗೆ?

ಶ್ರೀ ಕೆ.ಎಚ್. ರಂಗನಾಥ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

ಅ) 727.074 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಬಿಡುಗಡೆ ಮಾಡಲಾಗಿದೆ. ಈ ಅರಣ್ಯ ಪ್ರದೇಶಗಳನ್ನು ಕಾರವಾರ, ಯಲ್ಲಾಪುರ, ಸಿರ್ಸಿ, ಸಾಗರ ಅರಣ್ಯ ವಿಭಾಗಗಳಲ್ಲಿ ಬಿಡುಗಡೆ ಮಾಡಲಾಗಿದೆ.

ಅ) ಕೈಗಾ 3ನೇ ಮತ್ತು 4ನೇ ಘಟಕಕ್ಕೆ ಲೈನ್ ಮಾರ್ಗ ಹೋಗಲು ಯಾವುದೇ ಪ್ರಸ್ತಾವನೆ- ಸರ್ಕಾರದ ಮಟ್ಟದಲ್ಲಿ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಕೈಗಾ 2ನೇ ಘಟಕಕ್ಕೆ ಸಂಬಂಧಿಸಿದಂತೆ, ವಿದ್ಯುತ್ ಮಾರ್ಗವನ್ನು ಬೇರೆ ಮಾರ್ಗದಲ್ಲಿ ಸಾಗುವ ಸಲುವಾಗಿ ಕರಾವಳಿ ಮೂಲಕ ತೆಗೆದುಕೊಂಡು ಹೋಗುವ ಕುರಿತು ಇರುವ ಸಾಧ್ಯಾಸಾಧ್ಯತೆಗಳ ಬಗ್ಗೆ ಎನ್.ಪಿ.ಸಿ. ಪವರ್ ಗ್ರಿಡ್ ಕಾರ್ಪೋರೇಷನ್ ಅಧಿಕಾರಿಗಳ ಜೊತೆ ಸಭೆ ನಡೆಸಿ ಚರ್ಚಿಸಲಾಗಿದ್ದು, ಕರಾವಳಿ ಮುಖಾಂತರ ಲೈನ್ ಮಾರ್ಗ ತೆಗೆದುಕೊಂಡು ಹೋಗಲು ತಾಂತ್ರಿಕವಾಗಿ ಸಾಧ್ಯವಾಗುವುದಿಲ್ಲವೆಂದು ಅಭಿಪ್ರಾಯ ವ್ಯಕ್ತವಾಗಿರುತ್ತದೆ.

ಉ) ಮೇಲೆ (ಈ) ಭಾಗದಲ್ಲಿ ವಿವರಿಸಿದಂತೆ ಈ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಲಾಗಿದೆ.

ರಾಜ್ಯದ ಹೋಟೆಲ್ ಕಾರ್ಮಿಕರಿಗೆ ಕನಿಷ್ಠ ವೇತನ ಜಾರಿ.

2298(3113) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) :— ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಹೋಟೆಲ್ ನೌಕರರ ಕನಿಷ್ಠ ವೇತನವನ್ನು ಪರಿಷ್ಕರಿಸಲು ಹಾಗೂ ಸೌಲಭ್ಯವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? ವೇತನ ಪರಿಷ್ಕರಣ ವಿಳಂಬವಾಗಿರಲು ಕಾರಣ ಏನು?

ಆ) ರಾಜ್ಯದ ಅಸಂಘಟಿತ ನೌಕರರಿಗೆ ಕನಿಷ್ಠ ವೇತನ ಹಾಗೂ ಇತರ ಸೌಲಭ್ಯ ಒದಗಿಸುವಂತೆ ಮಾಡಲು ಸರ್ಕಾರದ ಯೋಜನೆಗಳೇನು?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :—

ಅ) ಹೋಟೆಲ್ ಉದ್ದಿಮೆಗೆ ಕನಿಷ್ಠ ವೇತನವನ್ನು ಪರಿಷ್ಕರಿಸುವ ಸಲುವಾಗಿ ದಿ: 8-3-2001 ರಂದು ಕರಡು ಪ್ರಸ್ತಾವನೆಯನ್ನು ಹೊರಡಿಸಿದೆ. ಹೋಟೆಲ್ ಉದ್ದಿಮೆಗೆ ಕನಿಷ್ಠ ವೇತನ ಪರಿಷ್ಕರಿಸಿ ದಿ: 9-2-1994ರಂದು ಅಧಿಸೂಚನೆಯನ್ನು ಹೊರಡಿಸಿದೆ. ಅದನ್ನು ಆಕ್ಷೇಪಿಸಿ ಕಾರ್ಮಿಕ ಸಂಘದವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಸದರಿ ರಿಟ್ ಅರ್ಜಿ ವಜಾ ಮಾಡಲಾಯಿತು. ಆ ಆದೇಶದ ವಿರುದ್ಧ ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘದವರು ದಿನಾಂಕ: 17-7-2000